ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 28.10.2024.
**ಪಾಟೀ ಸವಾಲುಃ** 2ನೇ ಎದುರುದಾರ ಪರ ವಕೀಲರಿಂದಃ

ಈ ಅರ್ಜಿಯನ್ನು ನಾನು ಪರಿಹಾರದ ಸಲುವಾಗಿ ಹಾಕಿರುತ್ತೇನೆ. ಸುಮಾರು 1 ವರ್ಷದ ಹಿಂದೆ ಅಪಘಾತವಾಗಿರುತ್ತದೆ. ಆ ದಿನ ನಾನು ಲಾರಿಯಲ್ಲಿ ಕುಳಿತು ಹೊರಟಿದ್ದೆ. ನಾನು ಲಾರಿಯಿಂದ ಕೆಳಗೆ ಇಳಿವಾಗ, ಅದರ ಚಾಲಕ ಲಾರಿಯನ್ನು ಒಮ್ಮೆಲೆ ಚಲಾಯಿಸಿದ, ಅದರಿಂದ ನನಗೆ ಎಡಕಾಲಿಗೆ ಗಾಯಾಗಳು ಆಗಿ ಮೂಳೆ ಮುರಿತವಾಗಿರುತ್ತದೆ. ಆ ದಿನ ಲಾರಿಯನ್ನು ಚಾಲನೆ ಮಾಡಿದ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಆ ದಿನ ಲಾರಿ ಚಾಲಕ ಮದ್ಯಪಾನ ಮಾಡಿ ಜೋರಾಗಿ ನಡೆಸುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾರ್ಮಲ್ ಆಗಿ ನಡೆಸುತ್ತಿದ್ದ ಎಂದು ನುಡಿಯುತ್ತಾರೆ. ನಿಪಿ-1ರ ದೂರನ್ನು ನನ್ನ ಅಣ್ಣ ರಾಜಕುಮಾರ ಕೊಟ್ಟಿರುತ್ತಾರೆ. ಈ ಬಗ್ಗೆ ಪೊಲೀಸರು ಲಾರಿ ಚಾಲಕನ ಮೇಲೆ ಮದ್ಯಪಾನ ಮಾಡಿ ಚಾಲನೆ ಮಾಡುತ್ತಿದ್ದ ಎಂದು ನಿಪಿ-3ರಂತೆ ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ.

ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಕಂತೇಪ್ಪ ಗೌಂಡಿ ಹತ್ತಿರ ಕೆಲಸ ಮಾಡುತ್ತೇನೆ. ಕೂಲಿ ಕೆಲಸ ಕೆಲವೊಮ್ಮೆ ಮಾತ್ರ ಇರುತ್ತದೆ ಎಂದರೆ ಸರಿ. ನಮಗೆ ಖಾಯಂ ಆಗಿ ಕೂಲಿ ಕೆಲಸ ಸಿಗುವುದಿಲ್ಲ ಎಂದರೆ ಸರಿ. ಅಪಘಾತ ಕಾಲಕ್ಕೆ ಸುಮಾರು 45 ವರ್ಷ ವಯಸ್ ಇತ್ತು ಎಂದರೆ, ಸಾಕ್ಷಿ 37 ವರ್ಷ ಎಂದು ನುಡಿಯುತ್ತಾರೆ. ಅದೇ ರೀತಿ ತಿಂಗಳಿಗೆ ರೂ.20,000/- ಗಳಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವಾದ ನಂತರ ಹುಮನಾಬಾದ್ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಒಂದು ದಾಖಲಾಗಿ ಮುಂದೆ ಕಲಬುರಗಿಯ ಸನ್ ರೈಜ್ ಆಸ್ಪತ್ರೆಗೆ ಬಂದಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನನಗೆ ಯಾವುದೇ ಚಿಕಿತ್ಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯಿಂದ ನನ್ನನ್ನು ಪೂರ್ತಿ ಗುಣಮುಖವಾದ ನಂತರ ಬಿಡುಗಡೆ

ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಬೇರೆ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ.

ನನಗೆ ಮೊದಲಿನ ರೀಯಲ್ಲಿಯೇ ಈಗಲೂ ಕೂಡಾ ಕೂಲಿ ಸಿಗುತ್ತದೆ ಎಂದರೆ ಸರಿಯಲ್ಲ. ನಿಪಿ-10ರ ಬಿಲ್‌ಗಳು ಸೃಷ್ಠಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪರಿಹಾರದ ಹಣ ಪಡೆಯುವ ಸಲುವಾಗಿ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1ನೇ ಎದುರುದಾರ ಪರ ವಕೀಲರಿಂದಃ

(1ನೇ ಎದುರುದಾರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಕಾರಣ ಪಾಟೀ ಸವಾಲು ಏನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.)

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**